ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : 3ಲಕ್ಷ ರೂಪಾಯಿ ಔಷಧಿ ಕೊಟ್ಟಿದ್ದೇವೆಂದು ಹೇಳಿದಿರಿ. ಆದರೆ ನಾವು ಹೋದಾಗ ಔಷಧಿ ಇರಲಿಲ್ಲ, ನಮಗೆ ಔಷಧಿ ಸಿಗಲಿಲ್ಲ. ನಾವು ತಪ್ಪು ಮಾಡಿದರೆ ಶಿಕ್ಷೆ ಆಗಬೇಕು. ಆ ವಿಚಾರ ಏಕೆ ಇಲ್ಲಿ ಬರಬಾರದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನೀವು ತಪ್ಪು ಮಾಡಿದ್ದೀರಿ ಎಂದು ಹೇಳಿದೆನೆ? ನೀವು ಏತಕ್ಕೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ?

ಶ್ರೀ ಬಸವರಾಜ ಪಾಟೀಲ್ ಅಟ್ಟೂರು : ಬೀದರ್ ಜಿಲ್ಲೆಯಲ್ಲಿ 17 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಘಟಕಗಳು ಇವೆ. ಅಲ್ಲಿ ವೈದ್ಯರಿಲ್ಲದೆ ಜನರು ಬಹಳ ತೊಂದರೆಯಲ್ಲಿದ್ದಾರೆ. ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ನಮ್ಮ ಬಸವಕಲ್ಯಾಣದಲ್ಲಿರತಕ್ಕ ಆರೋಗ್ಯ ಕೇಂದ್ರಗಳಲ್ಲಿ, ಆರೋಗ್ಯ ಘಟಕಗಳಲ್ಲಿ ಕಳೆದ ೫ ವರ್ಷಗಳಿಂದ ವೈದ್ಯರಿಲ್ಲದೆ ತೊಂದರೆಯಾಗುತ್ತಿದೆ. ಆ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ಬಹಳ ಕಾಲದಿಂದ ವೈದ್ಯರನ್ನು ಮತ್ತು ಸಿಬ್ಬಂದಿ ವರ್ಗದವರನ್ನು ರೆಕ್ರೂಟ್ ಮಾಡದೆ ತೊಂದರೆಯಾಗಿತ್ತು. ಈಗ 538 ಮಂದಿ ವೈದ್ಯರನ್ನು ರೆಕ್ರೂಟ್ ಮಾಡಿದ್ದೇವೆ. ಅವರು ವೈದ್ಯಕೀಯ ತಾಪಸಣೆಗೆ ಹೋಗಿದ್ದಾರೆ. 20 ದಿನಗಳಲ್ಲಿ ಅವರ ಲಿಸ್ಟ್ ಬರುತ್ತದೆ. ಬಂದ ತಕ್ಷಣ ಆದಷ್ಟು ಮಟ್ಟಿಗೆ ಎಲ್ಲಾ ಆಸ್ಪತ್ರೆಗಳಿಗೆ ವೈದ್ಯರನ್ನು ಒದಗಿಸುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಮ್ಮ ತಾಲ್ಲೂಕಿನಲ್ಲಿ 13 ಮಂದಿ ವೈದ್ಯರ ಪೈಕಿ 3 ಜನ ಮಾತ್ರ ಇದ್ದಾರೆ. ಇನ್ನೂ ಹತ್ತು ಹುದ್ದೆಗಳು ಖಾಲಿ ಇದೆ. ಅವನ್ನು ಎಷ್ಟು ದಿನಗಳಲ್ಲಿ ಭರ್ತಿ ಮಾಡುತ್ತೀರಿ?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ : ನಾನು ಆಗಲೇ ಅದಕ್ಕೆ ಉತ್ತರ ಹೇಳಿದ್ದೇನೆ.

ಉಪಾಧ್ಯಕ್ಷರು : ಇಲ್ಲಿಗೆ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ವಾಟಾಳ್ ನಾಗರಾಜ್ : 1185 ನೇ ಸಂಖ್ಯೆಯ ಪ್ರಶ್ನೆ ಇದೆ.

ಉಪಾಧ್ಯಕ್ಷರು : ಒಂದು ಗಂಟೆ ಆದಮೇಲೆ ಮತ್ತೆ ತೆಗೆದು ಕೊಳ್ಳುವುದಕ್ಕಾಗುವುದಿಲ್ಲ. ತಮ್ಮ ಹೆಸರು ಕರೆದಾಗ ತಾವು ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇದು ಬಹಳ ಪ್ರಮುಖವಾದುದು.

ಶ್ರೀ ಕೆ.ಹೆಚ್. ಪಾಟೀಲ್ : ಪ್ರಶ್ನೋತ್ತರ ವೇಳೆ ಮುಗಿದ ಮೇಲೆ ಹೀಗೆ ಮಾಡಿದರೆ ಹೇಗೆ?

ಶ್ರೀ ಡಿ.ಬಿ. ಚಂದ್ರೇಗೌಡ : ಜಯದೇವ ಹೃದ್ರೋಗ ಆಸ್ಪತ್ರೆ ಇಡೀ ರಾಜ್ಯದಲ್ಲಿ ಒಂದೇ ಇರುವುದು. ಇದು ಬಹಳ ಮುಖ್ಯವಾದುದೆಂದು ಹೇಳಿದರು . ತಾವು ಅಪ್ಪಣೆ ಕೊಡದೆ ಇದ್ದರೆ ನಾವು ಏನು ಮಾಡುವುದಕ್ಕಾಗುತ್ತದೆ.

ಉಪಾಧ್ಯಕ್ಷಿರು : ಅದನ್ನು ಹೆಲ್ಡ್ ಓವರ್ ಮಾಡುತ್ತೇನೆ?

ಶ್ರೀ ವಾಟಾಳ್ ನಾಗರಾಜ್ : ಆಗಬಹುದು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕುಟುಂಬ ಕಲ್ಯಾಣ ಕಾರ್ಯಕ್ರಮ

510 - ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಾಹಳ್ಳಿ) : ಮಾನ್ಯ ಆರೋಗ್ಯ ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕುಟುಂಬ ಕಲ್ಯಾಣ ಕಾರ್ಯಕ್ರಮವು ಕುಂಠಿತಗೊಂಡಿರುವುದು ನಿಜವೇ?

ಆ) ಹಾಗಿದ್ದರೆ, ಇದಕ್ಕೆ ಕಾರಣಗಳೇನು?

ಇ) ಕಾರ್ಯಕ್ರಮವನ್ನು ಚುರುಕುಗೊಳಿಸಲು ಕೈಗೊಂಡ ಪರಿಹಾರೋಪಕ ಕ್ರಮಗಳಾವುವು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಇಲ್ಲ

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಅನೇಕಲ್‌ನಲ್ಲಿರುವ ಸರ್ಕಾರಿ ಆಸ್ಪತ್ರೆ

505 - ಶ್ರೀ ಎಂ.ಪಿ. ಕೇಶವಮೂರ್ತಿ (ಅನೇಕಲ್) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆಯ ಅನೇಕಲ್‌ನಲ್ಲಿರುವ ಸರಕಾರಿ ಆಸ್ಪತ್ರೆಗೆ 50 ಹಾಸಿಗೆಗಳ ಸಾಲಭ್ಯ ಒದಗಿಸಲು ಸರ್ಕಾರದವರು ಯೋಚಿಸಿದ್ದಾರೆಯೇ

ಆ) ಹಾಗಿದ್ದಲ್ಲಿ ಈ ಸೌಲಭ್ಯವನ್ನು ಒದಗಿಸಲು ಯಾವಾಗ ಕ್ರಮ ಕೈಗೊಳ್ಳಲಾಗುವುದು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೆ, ದಿನಾಂಕ 13-3-91ರ ಲಿಖಿತ ಮೂಲಕ ಉತ್ತರಿಸುವ 8ನೇ ಪಟ್ಟಿಯಲ್ಲಿರುವ ಪ್ರಶ್ನೆಗಳ ಪೈಕಿ 119, 781, 1223, 1171, 1221, 1220, 1217, 1218, 327, 484, 1143, 1144, 1145, 1151, 1152, 317, 1208, 691, 1177, 180, 212, 91, 1206, 204, 1169, 1170, 1191- ಈ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಸಂಬಂಧಪಟ್ಟ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಳಸ ಮತ್ತು ಬಾಳೆಹೊಳೆ ಆಸ್ಪತ್ರೆ ಬಗ್ಗೆ

118 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕಿನ ಕಳಸ ಹಾಗೂ ಬಾಳೆಹೊಳೆ ಆಸ್ಪತ್ರೆಗಳಲ್ಲಿ ಮಹಿಳಾ ವೈದ್ಯರ ಹುದ್ದೆಗಳು ಬಹಳ ವರ್ಷಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿದೆ.